# ಕರ್ನಾಟಕ ವಿಧಾನಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | 2076 |
| **ಸದಸ್ಯರ ಹೆಸರು** | ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| **ಉತ್ತರಿಸಬೇಕಾದ ದಿನಾಂಕ** | 24.03.2021 |
| **ಉತ್ತರಿಸುವ ಸಚಿವರು** | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ ವಿವರ | ಉತ್ತರ |
|---|---|---|
| ಅ) | ರಾಜ್ಯದಲ್ಲಿ 11ಇ ನಕ್ಷೆಯನ್ನು ಯಾವ ಯಾವ ಉದ್ದೇಶಗಳಿಗೆ ಬಳಸಲಾಗುತ್ತಿದೆ; 11ಇ ನಕ್ಷೆಯನ್ನು ಪಡೆಯಲು ಅಗತ್ಯ ವಾದ ದಾಖಲೆಗಳು ಯಾವುವು; ಅನುಸರಿಸಬೇಕಾದ ಕ್ರಮಗಳು ಯಾವು ವು; (ಆದೇಶದ ಪ್ರತಿ ಒದಗಿಸು ವುದು) | ರಾಜ್ಯದಲ್ಲಿ 11ಇ ನಕ್ಷೆಯನ್ನು ಕ್ರಯ, ದಾನ, ಪಾಲು ವಿಭಾಗ, ನ್ಯಾಯಾಲಯದ ಡಿಕ್ರಿ, ಮೊದಲಾದ ವಹಿವಾಟುಗಳಲ್ಲಿ ಬಳಸಲಾಗುತ್ತಿದೆ.<br>**11ಇ ನಕ್ಷೆಯನ್ನು ಪಡೆಯಲು ಅಗತ್ಯವಾದ ದಾಖಲೆಗಳು. ಮತ್ತು ಅನುಸರಿಸುತ್ತಿರುವ ಕ್ರಮಗಳು ಈ ಕೆಳಕಂಡಂತಿವೆ:-**<br>1. ಅರ್ಜಿದಾರರು 11ಇ ಕೋರಿ ಅರ್ಜಿ ಸಲ್ಲಿಸಲು ಪಹಣಿಯಲ್ಲಿನ ಹಕ್ಕುದಾರರಾಗಿರಬೇಕು.<br>2. ಅರ್ಜಿದಾರರು 11ಇ ಕೋರಿ ಅರ್ಜಿ ಸಲ್ಲಿಸಲು ಅವರು ಖುದ್ದು ಅಥವಾ ಅವರಿಂದ ದೃಢೀಕರಣ ಪತ್ರ ಪಡೆದಿರುವ ಅಧಿಕೃತ ಪ್ರತಿನಿಧಿಗಳ ಮೂಲಕ ಭಾವಚಿತ್ರ ಸಹಿತ ಗುರುತಿನ ಚೀಟಿ ಯೊಂದಿಗೆ ಸಂಬಂದಿಸಿದ ಹೋಬಳಿ ಮಟ್ಟದ ಅಟಲ್-ಜಿ-ಜನಸ್ನೇಹಿ ಕೇಂದ್ರದಲ್ಲಿ ಮೌಖಿಕವಾಗಿ ಮಾಹಿತಿ ನೀಡಿ ಅರ್ಜಿ ದಾಖಲಿಸಬೇಕು.<br>3. ಅರ್ಜಿದಾರರು ಸರ್ಕಾರ ನಿಗಧಿಪಡಿಸಿರುವ ಶುಲ್ಕವನ್ನು ಭರಿಸ ಬೇಕು.<br>4. ಅರ್ಜಿದಾರರು ತಮ್ಮ ಭಾವಚಿತ್ರ ಸಹಿತ ಗುರುತಿನ ಚೀಟಿಯ ಹೊರತಾಗಿ ಯಾವುದೇ ದಾಖಲೆ ಸಲ್ಲಿಸಬೇಕಾಗಿರುವುದಿಲ್ಲ.<br>5. ಗುರುತಿನ ಚೀಟಿಯ ಸಹಾಯದಿಂದ ಅಳತೆ ವೇಳೆ ಅರ್ಜಿದಾರರನ್ನು ಗುರ್ತಿಸಲಾಗುವುದು.<br>6. ಅಳತೆ ವೇಳೆ ಅರ್ಜಿದಾರರು ಗುರುತಿನ ಚೀಟಿಯೊಂದಿಗೆ ಸ್ಥಳದಲ್ಲಿ ಹಾಜರಿದ್ದು ತಮ್ಮ ಅನುಭವ ತೋರಿಸಬೇಕು.<br>7. ನಂತರ ಅವರ ಹಕ್ಕು ಮತ್ತು ಅನುಭವ ಆಧರಿಸಿ ನಿಯಮಾನುಸಾರ 11ಇ ನಕ್ಷೆ ತಯಾರಿಸಲಾ ಗುವುದು.<br><br>ಸಂಬಂಧಿಸಿದ ಆದೇಶದ ಪ್ರತಿಯನ್ನು ಅನುಬಂದ-1ರಲ್ಲಿ ನೀಡಿದೆ. |
| ಆ) | ಯಾವ ಯಾವ ಸಂದರ್ಭದಲ್ಲಿ ಭೂಸ್ವಾಧೀನತೆಯ ಮ್ಯುಟೇಷನ್ ಮಾಡಲು 11ಇ ನಕ್ಷೆಯಿಂದ ವಿನಾಯಿತಿ ಯನ್ನು ನೀಡಲಾಗಿದೆ; (ಆದೇಶದ ಪ್ರತಿ ಯನ್ನು ನೀಡುವುದು) ಈ ಕುರಿತು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾ ಗಿದೆಯೇ; | ಭೂಸ್ವಾಧೀನ ಪ್ರಕರಣಗಳಲ್ಲಿ 11ಇ ನಕ್ಷೆ ಅವಶ್ಯಕತೆ ಇರುವು ದಿಲ್ಲ. ಆದರೆ ಖಾಸಗಿ ಒಡೆತನದ ಕೃಷಿ ಜಮೀನುಗಳನ್ನು ಸಾರ್ವಜನಿಕ ಉಪಯೋಗಕ್ಕಾಗಿ ಸರ್ಕಾರದಿಂದ ಯೋಜನೆಗಳ ಸಲುವಾಗಿ ಸರ್ಕಾರದಿಂದ ನೇರವಾಗಿ ಖರೀದಿಸುವ ಸಂದರ್ಭದಲ್ಲಿ 11ಇ ನಕ್ಷೆ ನೀಡಲಾಗುತ್ತಿದೆ. ಸಾರ್ವಜನಿಕರ ಉಪಯೋಗಕ್ಕಾಗಿ ಖರೀದಿಸಲಾಗುವ ಜಮೀನುಗಳ ಕುರಿತು 11ಇ ನಕ್ಷೆಯನ್ನು ಶೀಘ್ರವಾಗಿ ತಯಾರಿಸಿ ವಿತರಿಸುವ ನಿಟ್ಟಿನಲ್ಲಿ ತಂತ್ರಾಂಶದಲ್ಲಿ **ಸರ್ಕಾರಿ ಉಪಯೋಗಕ್ಕಾಗಿ** ಎಂಬ ಪ್ರತ್ಯೇಕ ಹೊಸ ಅವಕಾಶವನ್ನು ಕಲ್ಪಿಸ ಲಾಗಿದೆ.<br>ಸಂಬಂಧಿಸಿದ ಆದೇಶದ ಪ್ರತಿಯನ್ನು ಅನುಬಂದ-2ರಲ್ಲಿರಿಸಿದೆ. |

| | | |
|---|---|---|
| ಇ) | ರಾಜ್ಯದ ಸಿವಿಲ್ ನ್ಯಾಯಾಲಯದ ಡಿಕ್ರಿ ಆದೇಶದ ಮೂಲಕ ಪಹಣಿ ಮತ್ತು ಖಾತಾ ಮ್ಯುಟೇಶನ್ ಸಂದರ್ಭದಲ್ಲಿ ನ್ಯಾಯಾಲಯವು ಅನುಮೋದಿಸಿದ ಜಾಗದ ನಕ್ಷೆಯ ಬದಲು ಹೊಸದಾಗಿ 11ಇ ನಕ್ಷೆಯನ್ನು ಕೋರುತ್ತಿರುವುದರಿಂದ ಅರ್ಜಿದಾರರು ತೊಂದರೆ ಯನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಅರ್ಜಿದಾರರು ನ್ಯಾಯಾಂಗ ನಿಂದನೆ ಅರ್ಜಿ ದಾಖಲಿಸಿರುವುದಕ್ಕೆ ಸರ್ಕಾರದ ಕ್ರಮವೇನು? | ಬಂದಿದೆ.<br><br>ನ್ಯಾಯಾಲಯದ ಡಿಕ್ರಿ ಪ್ರಕರಣದಲ್ಲಿ 11ಇ ನಕ್ಷೆಯ ಬದಲಿಗೆ ಈ ಹಿಂದೆ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗಿದ್ದ ನಕ್ಷೆಯನ್ನು ನ್ಯಾಯಾಲಯದ ಅನುಮೋದನೆ ನಂತರ ಸದರಿ ಅನುಮೋದಿತ ನಕ್ಷೆಯನ್ನು ಖಾತಾ ಮ್ಯುಟೇಶನ್ ಸಂದರ್ಭದಲ್ಲಿ ಪರಿಗಣಿಸಿ ನ್ಯಾಯಾಲಯವು ಅನುಮೋದಿಸಿದ ನಕ್ಷೆ ಅನುಸಾರವೇ ಕಂದಾಯ ದಾಖಲೆಗಳನ್ನು ಕಾಲೋಚಿತಗೊಳಿಸಬೇಕಾಗಿರುತ್ತದೆ. ಆದರೆ ಮ್ಯುಟೇಶನ್ ಮತ್ತು ಸರ್ವೆ ದಾಖಲೆಗಳಲ್ಲಿ ನ್ಯಾಯಾಲಯ ದಿಂದ ಅನುಮೊದಿತ ನಕ್ಷೆಯನ್ನು ಬಳಸಬೇಕಾಗಿರುತ್ತದೆ. ಈ ಬಗ್ಗೆ ಗೊಂದಲಗಳಿರುವುದನ್ನು ನಿವಾರಿಸಲು ಅಗತ್ಯ ಮಾರ್ಗಸೂಚಿ ಯನ್ನು ಹೊರಡಿಸಲಾಗುವುದು. |

**ಸಂಖ್ಯೆ: ಕಂಇ 69 ಎಸ್‌ಎಸ್‌ಸಿ 2021**

**(ಆರ್.ಅಶೋಕ)**
ಕಂದಾಯ ಸಚಿವರು

ಅನುಬಂಧ - 1 1

ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ,
ಭೂಮಾಪನ, ಕಂದಾಯ ವ್ಯವಸ್ಥೆ
ಮತ್ತು ಭೂದಾಖಲೆಗಳ ಇಲಾಖೆ,
ಕೆ.ಆರ್. ವೃತ್ತ, ಬೆಂಗಳೂರು-560001.
ದೂರವಾಣಿ: 91-080-22212408
ಫ್ಯಾಕ್ಸ್-91-080-22277528

ಸಂಖ್ಯೆ: ಪಿ.ಎಂ.ಯು.ಮೋಜಿಣಿ.75/2012-13 ದಿನಾಂಕ 26.12.2012.

# ಸುತ್ತೋಲೆ

ವಿಷಯ: ವಿಕೇಂದ್ರಿಕೃತ ನಾಡ ಕಛೇರಿ ವ್ಯವಸ್ಥೆಯಲ್ಲಿ 11ಇ ನಕ್ಷೆ ಕೋರಿ ಬರುವ ಅರ್ಜಿಗಳನ್ನು ಸ್ವೀಕರಿಸುವ ಬಗ್ಗೆ.

*****

ಸಾರ್ವಜನಿಕರಿಗೆ ಮ್ಯುಟೇಶನ್ ಪೂರ್ವ ನಕ್ಷೆಗಳನ್ನು ವಿತರಿಸಲು ಮೋಜಿಣಿ ಎಂಬ ಅಂತರ್ಜಾಲ ವ್ಯವಸ್ಥೆಯನ್ನು ಇಲಾಖೆಯಲ್ಲಿ ನಿರ್ವಹಿಸಲಾಗುತ್ತಿದೆ. ಮೋಜಿಣಿ ವ್ಯವಸ್ಥೆಯನ್ನು ಇ-ಆಡಳಿತ ಇಲಾಖೆಯ ಸಹಭಾಗಿತ್ವದಲ್ಲಿ, ನೆಮ್ಮದಿ ಯೋಜನೆಯನ್ನು ನಿರ್ವಹಿಸುತ್ತಿದ್ದ ಸಂಸ್ಥೆಯ ಸಹಯೋಗದೊಂದಿಗೆ ಜಾರಿಯಲ್ಲಿತ್ತು.

ಸಾರ್ವಜನಿಕರಿಂದ ಬರುವ 11ಇ ನಕ್ಷೆ ಕೋರಿಕೆಗಳನ್ನು ಸ್ವೀಕರಿಸುವ, ನಕ್ಷೆ ವಿತರಿಸುವ ಮತ್ತು ಬ್ಯಾಕ್ ಎಂಡ್ ಕೆಲಸಗಳನ್ನು ತಾಲ್ಲೂಕು ಕಛೇರಿಯಲ್ಲಿರುವ ನೆಮ್ಮದಿ ಯೋಜನೆಯ ಬ್ಯಾಕ್ ಆಫೀಸ್‌ನಿಂದ ನಿರ್ವಹಿಸಲಾಗುತ್ತಿತ್ತು. ಈ ವ್ಯವಸ್ಥೆಯಲ್ಲಿ, ಸಾರ್ವಜನಿಕರು :

1) 11ಇ ನಕ್ಷೆ ಕೋರಿ ಅರ್ಜಿಯನ್ನು ತಾಲ್ಲೂಕು ಕಛೇರಿಯಲ್ಲಿ ನೆಮ್ಮದಿ ಬ್ಯಾಕ್ ಆಫೀಸ್‌ನಲ್ಲಿ ಸಲ್ಲಿಸಬೇಕಾಗಿತ್ತು.
2) ಅರ್ಜಿದಾರರು ತಮ್ಮ ಕೋರಿಕೆಯನ್ನು 11ಬಿ ನಮೂನೆಯಲ್ಲಿ ಭರ್ತಿ ಮಾಡಿ, ಪಹಣಿಯ ತರಹ ಅನುಸರಿಸಿ ಹಲವು ದಾಖಲೆಗಳನ್ನು ಸಹ ಅರ್ಜಿಯೊಂದಿಗೆ ಸಲ್ಲಿಸಬೇಕಾಗಿತ್ತು.

ಈ ರೀತಿಯಾಗಿ ಅರ್ಜಿದಾರರು ಸಲ್ಲಿಸಿದ ಅರ್ಜಿಗಳನ್ನು ತಾಲ್ಲೂಕು ಕಛೇರಿಯ ನೆಮ್ಮದಿ ಬ್ಯಾಕ್ ಆಫೀಸ್‌ನ operator ಮೋಜಿಣಿ ತಂತ್ರಾಂಶದಲ್ಲಿ ದಾಖಲಿಸಿ, ಅರ್ಜಿ ಹಣವನ್ನು ಸಂಗ್ರಹಿಸುತ್ತಿದ್ದರು. Operator ಗಳು ಪ್ರತಿ ದಿನ ಸಂಗ್ರಹವಾದ ಹಣವನ್ನು ತಾಲ್ಲೂಕು ಸರ್ವೆ ಸೂಪರ್‌ವೈಸರ್ ರವರಿಗೆ ಹಸ್ತಾಂತರಿಸುತ್ತಿದ್ದು, ಸರ್ವೆ ಸೂಪರ್‌ವೈಸರ್ ರವರು ಮೋಜಿಣಿ ಬಳಕೆದಾರರ ಖಾತೆಗೆ ಜಮೆ ಮಾಡುತ್ತಿದ್ದರು.

ಸ್ವೀಕೃತ ಅರ್ಜಿಗಳನ್ನು ಆಪರೇಟರ್ ಮುಂದಿನ ಕ್ರಮಗಳಾದ ತಪಾಸಣೆ, ಅಳತೆಗೆ ಅರ್ಜಿಗಳ ಹಂಚಿಕೆ, ಆರ್‌ಟಿಸಿ ತಿದ್ದುಪಡಿ, ದಾಖಲೆಗಳ ಪುನರ್ ನಿರ್ಮಾಣ ಇತ್ಯಾದಿ ಕಾರ್ಯ ನಿರ್ವಹಿಸಲು ತಪಾಸಣೆ ಭೂಮಾಪಕರ ಲಾಗಿನ್‌ಗೆ ಅರ್ಜಿಯನ್ನು ಕಳುಹಿಸಲಾಗುತ್ತಿತ್ತು.

ಈ ರೀತಿಯಾದ ವ್ಯವಸ್ಥೆಯಲ್ಲಿ.

1) ಸಾರ್ವಜನಿಕರಿಂದ ಬಂದ ಕೋರಿಕೆಗಳನ್ನು ನೇರವಾಗಿ ಮೋಜಣಿ ವ್ಯವಸ್ಥೆಯಲ್ಲಿ ದಾಖಲಿಸದೆ, ಅರ್ಜಿಯು ಆರ್‌ಟಿಸಿ ಸರ್ವೆ ನಂಬರಿನ ವಿವರಗಳನ್ನು ಆಕಾರಬಂದ್‌ನೊಂದಿಗೆ ತಾಳೆ ಮಾಡಿ, ಸರಿಯಿದ್ದರೆ ಮಾತ್ರ ಅರ್ಜಿಗಳನ್ನು ದಾಖಲಿಸಲಾಗುತ್ತಿತ್ತು.
2) ಆರ್‌ಟಿಸಿ ಮತ್ತು ಆಕಾರಬಂದ್ ವಿವರಗಳು ತಾಳೆ ಇಲ್ಲವಾದ ಪ್ರಕರಣಗಳಲ್ಲಿ ಅರ್ಜಿಗಳನ್ನು ಸ್ವೀಕರಿಸಲು ನಿರಾಕರಿಸಲಾಗುತ್ತಿತ್ತು.
3) ಅರ್ಜಿದಾರರಿಂದ ಅರ್ಜಿ ಸ್ವೀಕರಿಸಿದ ಕೂಡಲೇ, ತಂತ್ರಾಂಶದಲ್ಲಿ ದಾಖಲಿಸಿ ಸಾರ್ವಜನಿಕರಿಗೆ ರಸೀದಿ ನೀಡುತ್ತಿರುವುದಿಲ್ಲ.
4) ಅರ್ಜಿಗಳನ್ನು ಸಂಗ್ರಹಿಸಿಕೊಂಡು ಆಪರೇಟರ್‌ಗಳ ಅನುಕೂಲ ಆಧರಿಸಿಕೊಂಡು ದಾಖಲೆ ಮಾಡುತ್ತಿದ್ದರು.
5) ಹಕ್ಕುದಾರರು ಮಾತ್ರ ಅರ್ಜಿಯನ್ನು ಸಲ್ಲಿಸಲು ಅವಕಾಶವಿತ್ತು.

ಮೇಲಿನ ಕಂಡಿಕೆಗಳಲ್ಲಿ ವಿವರಿಸಿರುವ ನ್ಯೂನತೆಗಳನ್ನು ನಿವಾರಿಸಿ, ಸಾರ್ವಜನಿಕರಿಗೆ ಹೆಚ್ಚಿನ ಅನುಕೂಲ ಮಾಡಿಕೊಡಲು ಸರ್ಕಾರವು ಹೋಬಳಿ ಮಟ್ಟದಲ್ಲಿ ನಾಡಕಛೇರಿಗಳನ್ನು ಸ್ಥಾಪಿಸಿ ಸಾರ್ವಜನಿಕರಿಗೆ ವಿವಿಧ ಯೋಜನೆ ಅಡಿಯಲ್ಲಿ ನೀಡುತ್ತಿದ್ದ ಸೇವೆಯನ್ನು ನೀಡಲು ಜಾರಿಗೊಳಿಸಿರುವ ವ್ಯವಸ್ಥೆಯನ್ನು ಬಳಸಿಕೊಂಡು ಸಾರ್ವಜನಿಕರಿಂದ 11ಇ ನಕ್ಷೆಗಳನ್ನು ಕೋರಿ ಸಲ್ಲಿಸುವ ಅರ್ಜಿಗಳನ್ನು ಸ್ವೀಕರಿಸಲು ಅವಕಾಶ ಕಲ್ಪಿಸಲಾಗಿದೆ. ಈ ಕೆಳಗೆ ವಿವರಿಸಿರುವಂತೆ ನಾಡ ಕಛೇರಿಗಳಲ್ಲಿ 11ಇ ನಕ್ಷೆ ಕೋರಿ ಬರುವ ಅರ್ಜಿಗಳನ್ನು ಸ್ವೀಕರಿಸಲು ಮೋಜಣಿ ವ್ಯವಸ್ಥೆಯನ್ನು ಮಾರ್ಪಡಿಸಿದೆ.

1) ಇನ್ನು ಮುಂದೆ ಸಾರ್ವಜನಿಕರು 11ಇ ನಕ್ಷೆ ಕೋರಿ ಅರ್ಜಿಗಳನ್ನು ಹೋಬಳಿ ಮಟ್ಟದಲ್ಲಿರುವ ನಾಡ ಕಛೇರಿಗಳಲ್ಲಿ "ಆನ್-ಲೈನ್" ನಲ್ಲಿ ದಾಖಲಿಸಬಹುದು.

2) ನಾಡ ಕಛೇರಿಗಳಲ್ಲಿ ಸಾರ್ವಜನಿಕರಿಂದ ಅರ್ಜಿಯನ್ನು ಆನ್-ಲೈನ್ ನಲ್ಲಿ ಭಾವಚಿತ್ರವಿರುವ ಗುರುತಿನ ಚೀಟಿ ಆಧಾರದ ಮೇಲೆ ದಾಖಲಿಸಲಾಗುತ್ತದೆ.

3) ಹಕ್ಕುದಾರರು ಅರ್ಜಿ ದಾಖಲಿಸಲು ಗುರುತಿನ ಚೀಟಿ ಹೊರತಾಗಿ ಯಾವುದೇ ದಾಖಲೆಯನ್ನು ಹಾಜರುಪಡಿಸಬೇಕಾಗಿರುವುದಿಲ್ಲ.

4) ನಾಡ ಕಛೇರಿಗಳಲ್ಲಿ ಪ್ರತಿದಿನ ಸಂಗ್ರಹವಾದ ಮೋಜಣಿ ಅರ್ಜಿ ಶುಲ್ಕದ ಹಣವನ್ನು ತಾಲ್ಲೂಕಿಗೆ ಅನ್ವಯಿಸುವ ಬ್ಯಾಂಕ್‌ನಲ್ಲಿರುವ ಆಯುಕ್ತರ ಪದನಾಮದ ತತ್ಕಾಲ್ ಮೋಜಣಿ ಬಳಕೆದಾರರ ಖಾತೆಗೆ ಪ್ರತಿದಿನ ಉಪ ತಹಶೀಲ್ದಾರ್ (D.T.) ರವರು ಜಮೆ ಮಾಡುವುದು.

5) ಪ್ರತಿದಿನ ಸಂಗ್ರಹವಾದ ಹಣವನ್ನು ಬ್ಯಾಂಕ್ ಖಾತೆಗೆ ಜಮೆ ಮಾಡುವಲ್ಲಿ ಏರು-ಪೇರು ಅಥವಾ ವ್ಯತ್ಯಾಸಗಳಾದಲ್ಲಿ ಅಂತಹ ಲೋಪವನ್ನು ತೀಕ್ಷ್ಣವಾಗಿ ಪರಿಗಣಿಸಿ ಸಂಬಂಧಿಸಿದ ಉಪ ತಹಶೀಲ್ದಾರ್ ರವರುಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು ಮತ್ತು ವ್ಯತ್ಯಾಸದ ಹಣವನ್ನು ಉಪ ತಹಶೀಲ್ದಾರ್ ರವರ ಸಂಬಳದಿಂದ ಕಟಾಯಿಸಿ ವಸೂಲಿ ಮಾಡಲಾಗುವುದು.

6) ನಾಡ ಕಛೇರಿಯಲ್ಲಿ ಅರ್ಜಿ ಸ್ವೀಕರಿಸಲು ಅನುಸರಿಸಬೇಕಾದ ಕ್ರಮಗಳ ವಿವರಗಳುಳ್ಳ ಕೈಪಿಡಿಯನ್ನು ಈ ಕೂಡ ಲಗತ್ತಿಸಿದೆ. ಕೈಪಿಡಿಯಲ್ಲಿ ನೀಡಿರುವ ಸೂಚನೆಗಳನ್ನು ಯಥಾವತ್ತಾಗಿ ಪಾಲಿಸಲು ಸೂಚಿಸಿದೆ.

ಆಯುಕ್ತರು,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳು, ಬೆಂಗಳೂರು.

ಪ್ರತಿಯನ್ನು:-

(1) ಎಲ್ಲಾ ಪ್ರಾದೇಶಿಕ ಆಯುಕ್ತರು ರವರುಗಳಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.
(2) ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.
(3) ಎಲ್ಲಾ ಭೂದಾಖಲೆಗಳ ಜಂಟಿ ನಿರ್ದೇಶಕರುಗಳಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.
(4) ಪ್ರಾಂಶುಪಾಲರು, ಭೂಮಾಪನ ತರಬೇತಿ ಸಂಸ್ಥೆ, ಮೈಸೂರು / ಗುಲ್ಬರ್ಗ ರವರುಗಳಿಗೆ ಮಾಹಿತಿಗಾಗಿ.
(5) ಎಲ್ಲಾ ಭೂದಾಖಲೆಗಳ ಉಪ ನಿರ್ದೇಶಕರುಗಳಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.
(6) ಎಲ್ಲಾ ಉಪ ವಿಭಾಗಾಧಿಕಾರಿಗಳಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.
(7) ಎಲ್ಲಾ ತಹಶೀಲ್ದಾರ್ ರವರುಗಳಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.
(8) ಉಪ ತಹಶೀಲ್ದಾರ್, ನಾಡ ಕಛೇರಿಗಳಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.

ಕರ್ನಾಟಕ ಸರ್ಕಾರ

# ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ

# ನಾಡಕಛೇರಿಗಳಲ್ಲಿ 11ಇ ನಕ್ಷೆಗಳ ಅರ್ಜಿಗಳನ್ನು ಸ್ವೀಕರಿಸಲು ಅನುಸರಿಸಬೇಕಾದ ಕ್ರಮದ

## ಕೈಪಿಡಿ

ಆಯುಕ್ತರು.
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳು, ಬೆಂಗಳೂರು

## GOVERNMENT OF KARNATAKA

No. RD 103 MRR 2002

Karnataka Government Secretariat,
M.S. Building,
Bangalore, dated: 19th August 2006.

## CIRCULAR

**Sub:** Requirement of pre mutation sketch for ownership change transaction in mutation kiosk and in Sub Registrar office-reg.

* * *

Karnataka Land Revenue Act has been amended to provide sketch of the land compulsorily in case a person is alienating any land i.e part of survey or sub number through the licensed surveyors. This provision has been inserted through amendment to section 131 (c) of KLR Act.

As per this amendment the sketch has to be presented along with deed before the registering authority. Similarly the third proviso to section 128 also man dates that any request which is given in the mutation kiosk for mutation under sub section 1 of section 128 will also be accompanied by he sketch.

A Notification No. RD 185 Munomu 2001 dated 20.08.2002, had been issued by the Government under section 22A of the Indian Registration Act, mandating production of sketches. The Hon'ble High Court of Karnataka in WP No. 39906/2002 (KLR) has quashed the above notification, following the decision of Division Bench of Hon'ble High Court of Karnataka in D. Pavanesh Vs. State of Karnataka in WP No.24309/2005 (GM-ST/KN-PIL) and judgment of Supreme Court in Civil Appeal No.7800/2001 declaring section 22A as unconstitutional.

The opinion of the law department was sought on enforcement of provisions of section 128 and 131 KLR Act, i.e. mandatory requirement of pre mutation sketch before registration of deed, in view of Supreme Court judgment in case No.7800/2001 and High court judgment in the case No.24309/2005 (GM-ST/KN-PIL)

In this regard the law department opined as below;

**" Sec 131 the KLR Act contemplates about the compulsory requirement of sketch for the purpose of presenting the deed before the registering authority. The decision of the Hon'ble Supreme court & High Court which relates to Sec 22A of the Registration Act cannot be applied to the provisions of sec 128 & 131 of Karnataka Land Revenue Act.Sec 131 ( c) of the KLR Act being in force the, same has to be complied. Therefore law department agrees with the**

**understanding of the administrative department as mentioned in para 9 n/f"**

Accordingly, the citizens should be advised by registering authorities and the mutation kiosk authorities to get a sketch prepared by licensed surveyors before they approach for registration of deeds or for filling of mutation requests.

For the purpose of facilitating quick service to citizens more than 2000 private surveyors have been licensed and if required more such surveyors would be licensed by the Government. The Bhoomi system will also not accept any request for mutation and any J-slip from Sub Registrar if the mutation sketch is not accompanied along with J slips or the documents directly presented in to mutation kiosk.

It shall be the responsibility of all the Revenue Officers and registering authorities in the State to enforce above provision of Karnataka Land Revenue Act. Any violation of this provision by any Revenue authorities in the State will be viewed seriously and disciplinary action initiated against the concerned.

This Circular is also available at the Revenue Department internet site **http://www.revdept.kar.nic.in.**

Sd/-
(S.M. JAAMDAR)
Principal Secretary to Government
Revenue Department.

To,

1. The Secretary to Government (LRF & Registration), Revenue Department.
2. The Inspector General of Stamps & Commissioner of Registration.
3. The Special Secretary ( Bhoomi ), Revenue Department.
4. The Commissioner, Survey Settlement and Land Records
5. All Regional Commissioners
6. All Deputy Commissioners
7. All Assistant Commissioners
8. All District Registrars
9. All Tahsildars
10. All Sub Registrars
11. SGF

ಸಂಖ್ಯೆ: ಪಿ.ಎಂ.ಯು. ಎಂಒಜೆ ಸಿಬಿಆರ್ 001/2013-14

ಆಯುಕ್ತರ ಕಚೇರಿ
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳ ಇಲಾಖೆ, ಬೆಂಗಳೂರು
ದಿನಾಂಕ: 13.02.2014

## ಸುತ್ತೋಲೆ

ವಿಷಯ : ಮೋಜಿಣಿ ತಂತ್ರಾಂಶದಡಿಯಲ್ಲಿ 11ಇ ನಕ್ಷೆ ಕೋರಿ, ಸ್ವೀಕರಿಸಲಾದ ಅರ್ಜಿಗಳಲ್ಲಿ, ಅರ್ಜಿದಾರರು ಪೌತಿಯಾಗಿದ್ದು, ಪೌತಿ ಖಾತೆಯನ್ನು ಬದಲಾಯಿಸದ, ವಿಭಾಗದ ಪ್ರಕರಣಗಳಡಿಯಲ್ಲಿ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿರುವ ಕುರಿತು

ಉಲ್ಲೇಖ: 1) ಕೇಂದ್ರ ಕಚೇರಿಯ ಸುತ್ತೋಲೆ ಸಂಖ್ಯೆ: ಪಿಎಂಯು ಮೋಜಿಣಿ ಸುತ್ತೋಲೆ 85/2012-13 ದಿನಾಂಕ 05/02/2013

*****

ಉಲ್ಲೇಖದ ಸುತ್ತೋಲೆಯನ್ವಯ ಮೋಜಿಣಿ ವ್ಯವಸ್ಥೆಯಡಿಯಲ್ಲಿ 11ಇ ನಕ್ಷೆ ಕೋರಿ ಬರುವ ಅರ್ಜಿಗಳನ್ನು ಸ್ವೀಕರಿಸುವಾಗ ಪಹಣಿಯ ಕಾಲಂ 9 ರಲ್ಲಿ ಅರ್ಜಿದಾರರ ಹೆಸರು ದಾಖಲಾಗಿದ್ದರೆ ಮಾತ್ರ ಅರ್ಜಿಗಳನ್ನು ಸ್ವೀಕರಿಸುವಂತೆ ಸೂಚನೆಗಳನ್ನು ನೀಡಲಾಗಿರುತ್ತದೆ.

ಆದರೆ ಮೋಜಿಣಿ ಆವೃತ್ತಿ 1 ಮತ್ತು 2 ರಲ್ಲಿ ಸ್ವೀಕರಿಸಲಾಗಿರುವ ಅರ್ಜಿಗಳು, ಅಳತೆಯಾಗಿ ನಕ್ಷೆ ವಿತರಣೆಯಾದ ನಂತರ ಪರಿಶೀಲನಾ ಹಂತದಲ್ಲಿ ಸದರಿ ಪ್ರಕರಣಗಳು ವಾರಸ್ಸು ಪ್ರಕರಣಗಳೆಂದು ಕಂಡು ಬಂದಿರುತ್ತದೆ. ಪಹಣಿಯ ಹಕ್ಕುದಾರರು ಪೌತಿಯಾಗಿರುವ ಕಾರಣ ಇವರ ಹೆಸರಿಗೆ ದುರಸ್ತಿ ಪಡಿಸಲು ರಹವಿರುವುದಿಲ್ಲ ಹಾಗೂ ಪಹಣಿಯಲ್ಲಿ ಇಲ್ಲದಿರುವ ಹೆಸರುಗಳನ್ನು ಹಿಸ್ಸೆಗಳಲ್ಲಿ ಇಂದೀಕರಿಸಲು ರಹ ಇರುವುದಿಲ್ಲ. ಆದ ಕಾರಣ ಮೋಜಿಣಿ ಆವೃತ್ತಿ-1 ಮತ್ತು ಆವೃತ್ತಿ 2 ರಲ್ಲಿ ರಲ್ಲಿ ವಿತರಿಸಿದ 11 ಇ ನಕ್ಷೆಗಳನ್ನು ಆಧರಿಸಿಕೊಂಡು ದುರಸ್ತಿ ಕ್ರಮ ಜರುಗಿಸಲು ರಹವಿಲ್ಲದಂತಾಗಿರುತ್ತದೆ.

ಮೋಜಿಣಿ ಆವೃತ್ತಿ-2 ರಲ್ಲಿ online ನಲ್ಲಿಯೇ ದುರಸ್ತಿಪಡಿಸಿದ ನಂತರ 11 ಇ ನಕ್ಷೆ ವಿತರಣೆ ಕ್ರಮ ಜರುಗಿಸಬೇಕಾಗಿರುತ್ತದೆ. ಪೌತಿಯಾದ ಅರ್ಜಿದಾರರ ಹೆಸರಿನ ಬದಲಿಗೆ ವಾರಸ್ಸುದಾರರ ಹೆಸರುಗಳನ್ನು ದಾಖಲಿಸಲು ತಂತ್ರಾಂಶದಲ್ಲಿ ಅವಕಾಶವಿರುವುದಿಲ್ಲ. ಇದರಿಂದಾಗಿ ವಿಭಾಗದ ಹೆಸರಿನಲ್ಲಿ ಸ್ವೀಕರಿಸಿರುವ ಪೌತಿ ವಾರಸ್ಸು ಬಾಬ್ತು ಅರ್ಜಿಗಳಲ್ಲಿ 11ಇ ನಕ್ಷೆ ವಿತರಿಸಲು ತೊಂದರೆಯಾಗಿರುತ್ತದೆ.

ವಿಭಾಗದ ಹೆಸರಿನಲ್ಲಿ ಸ್ವೀಕರಿಸಲಾಗಿರುವ ಪೌತಿ ವಾರಸ್ಸು ಅರ್ಜಿಗಳ ಕುರಿತು ಈ ಕೆಳಗೆ ತಿಳಿಸಿರುವಂತೆ ಕ್ರಮ ಜರುಗಿಸಲು ಸೂಚಿಸಿರುತ್ತದೆ.

- ವಿಭಾಗದ ಹೆಸರಿನಲ್ಲಿ ಸ್ವೀಕರಿಸಿ, ಅಳತೆಯಾಗಿ ಬಂದಿರುವ ಅರ್ಜಿದಾರರು ಪೌತಿ ಎಂದು ದಾಖಲಿಸಿರುವ ಅರ್ಜಿಗಳನ್ನು ತಕರಾರು ಪ್ರಕರಣದಡಿಯಲ್ಲಿ ಭೂ.ಸ.ನಿ ರವರ ಲಾಗಿನ್ ನಲ್ಲಿ ದಾಖಲಿಸುವುದು.
- ಅರ್ಜಿಯಲ್ಲಿ ವಿವರಿಸಿರುವ ಹಕ್ಕುದಾರರುಗಳಿಗೆ ಪೌತಿ ವಾರಸ್ಸು ಮುಖಾಂತರ ಹಕ್ಕುದಾರರ ಬಗ್ಗೆ ಖಾತಾ ಬದಲಾವಣೆ ಮಾಡಿಸಿಕೊಂಡು ಪಹಣಿಯಲ್ಲಿ ಇಂಡೀಕರಿಸಿಕೊಂಡು ಬರುವ ಬಗ್ಗೆ ಹಿಂಬರಹ ನೀಡುವುದು.
- ಪೌತಿ ವಾರಸ್ಸು ಮ್ಯುಟೇಷನ್ ಮುಖಾಂತರ ಹಕ್ಕುದಾರರನ್ನು ಗುರುತಿಸಿ, ಮ್ಯುಟೇಷನ್ ಪೂರೈಸಿದ ದ್ಯಾಖಲೆಗಳನ್ನು ಹಾಜರುಪಡಿಸಿದರೆ, ಅಂತಹ ಅರ್ಜಿಗಳನ್ನು ತಕರಾರು ಪ್ರಕರಣದಿಂದ ಭೂ.ಸ.ನಿ ರವರ ಆದೇಶ ಪಡೆದು ರೀ ಡಾಟಾ ಎಂಟ್ರಿ ಮಾಡುವುದು.
- ಮೂಲ 11ಇ ಅರ್ಜಿಯಲ್ಲಿ ನೀಡಿರುವ ವಿಭಾಗದಾರರೇ ಪೌತಿ ವಾರಸ್ಸಿನಂತೆ ಹಕ್ಕುದಾರರಾಗಿದ್ದಾರೆಯೇ ಎಂಬುದನ್ನು ಖಾತ್ರಿ ಪಡಿಸಿಕೊಂಡು ರೀ-ಡಾಟಾ ಎಂಟ್ರಿ ಮಾಡುವುದು. ರೀ ಡಾಟಾ ಎಂಟ್ರಿ ಮಾಡಿದ ನಂತರ ಮೋಜಿಣಿಯಲ್ಲಿ ದುರಸ್ತಿ ಕ್ರಮ ಜರುಗಿಸಿ ನಕ್ಷೆ ವಿತರಿಸುವುದು
- ಮೂಲ 11ಇ ಅರ್ಜಿಯಲ್ಲಿ ನೀಡಿರುವ ವಿಭಾಗದಾರರೇ ಪೌತಿ ವಾರಸ್ಸಿನಂತೆ ಹಕ್ಕುದಾರರೆಂದು ಖಾತ್ರಿ ಯಾಗದಿದ್ದಲ್ಲಿ ಅಂತಹ ಅರ್ಜಿಗಳನ್ನು ವಿಲೆ ಪಡಿಸುವುದು.

ಈ ಸುತ್ತೋಲೆಯಲ್ಲಿ ನಮೂದಿಸಲಾಗಿರುವ ಅಂಶಗಳು ತಕ್ಷಣದಿಂದ ಜಾರಿಗೆ ಬರುತ್ತದೆ. ಹಾಗೂ ಸುತ್ತೋಲೆಯಲ್ಲಿ ಸೂಚಿಸಿರುವಂತೆ ಅರ್ಜಿಯಲ್ಲಿ ವಿವರಿಸಿರುವ ಹಕ್ಕುದಾರರುಗಳಿಗೆ ಪೌತಿ ವಾರಸ್ಸು ಮುಖಾಂತರ ಹಕ್ಕುದಾರರ ಬಗ್ಗೆ ಖಾತಾ ಬದಲಾವಣೆ ಮಾಡಿಸಿಕೊಂಡು ಪಹಣಿಯಲ್ಲಿ ಇಂದೀಕರಿಸಿಕೊಂಡು ಬರುವ ಬಗ್ಗೆ ಕೂಡಲೆ ಹಿಂಬರಹ ನೀಡಲು ಸೂಚಿಸಿದೆ.

ಆಯುಕ್ತರು,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳ ಇಲಾಖೆ, ಬೆಂಗಳೂರು

ಪ್ರತಿಯನ್ನು:

1) ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾಹಿತಿಗಾಗಿ.
2) ಎಲ್ಲಾ ಉಪ ವಿಭಾಗಾಧಿಕಾರಿಗಳಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ
3) ಎಲ್ಲಾ ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪ ನಿರ್ದೇಶಕರುಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
4) ಎಲ್ಲಾ ಭೂದಾಖಲೆಗಳ ಸಹಾಯಕ ನಿರ್ದೇಶಕರುಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
5) ಎಲ್ಲಾ ತಹಶೀಲ್ದಾರ್ ರವರುಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ
6) ಕೇಂದ್ರ ಕಚೇರಿಯ ಸುತ್ತೋಲೆ ಘಟಕಕ್ಕೆ

ಅನುಬಂಧ - 2

ಕರ್ನಾಟಕ ಸರ್ಕಾರ

SSLR/PMU/ಎಂಓಜೆ/ಸಿಐಆರ್ 13019/9/2018

ಆಯುಕ್ತರ ಕಚೇರಿ
ಭೂಮಾಪನ ಕಂದಾಯ ವ್ಯವಸ್ಥೆ
ಮತ್ತು ಭೂದಾಖಲೆಗಳ ಇಲಾಖೆ ,
ಕೆ.ಆರ್ ವೃತ್ತ.ಬೆಂಗಳೂರು,01-
ದಿನಾಂಕ : 21/03/18

**ಸುತ್ತೋಲೆ**

ವಿಷಯ: ಸಾರ್ವಜನಿಕ ಉಪಯೋಗಕ್ಕಾಗಿ ಸರ್ಕಾರದಿಂದ ಅನುಮೋದಿಸಲ್ಪಟ್ಟ Power Project ಗಳಿಗೆ ಸಂಬಂಧಿಸಿದಂತೆ 11 ಇ ನಕ್ಷೆ ಕೋರಿ ಸಲ್ಲಿಸುವ ಅರ್ಜಿಗಳನ್ನು ಹೊಸದಾಗಿ ತಂತ್ರಾಂಶದಲ್ಲಿ ಅಳವಡಿಸಲಾಗಿರುವ ಸರ್ಕಾರಿ ಅವಶ್ಯಕತೆಗೆ ಎಂಬ ಶೀರ್ಷಿಕೆಯಡಿಯಲ್ಲಿ 11ಇ ನಕ್ಷೆ ಕೋರಿ ಬರುವ ಅರ್ಜಿಗಳನ್ನು ಸ್ವೀಕರಿಸುವ ಕುರಿತು

ಉಲ್ಲೇಖ: ಮೆ.ಆರ್ ಬಿ ಆರ್ ಕೆ ಇನ್ವೆಸ್ಟ್ ಮೆಂಟ್ಸ್ ಲಿ., ಕಂಪನಿ ಯವರ ಪತ್ರ ನಂ:ಭೂಮಾಬೆಂ/2017-18/ ದಿ:22/12/2017

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಪ್ರಸ್ತುತ ಮೋಜಿಣಿ ಯೋಜನೆಯಡಿಯಲ್ಲಿ ಯಾವುದೇ ಹಿಡುವಳಿ ಸರ್ವೆ ನಂಬರುಗಳಲ್ಲಿ ಕ್ರಯ, ವಿಭಾಗ, ಪಾಲು ಪಟ್ಟಿಗೆ 11ಇ ನಕ್ಷೆ ಕೋರಿ ಸಲ್ಲಿಸಲಾಗುವ ಅರ್ಜಿಗಳನ್ನು ತಂತ್ರಾಂಶದ ಮೂಲಕ ನಾಡಕಚೇರಿಗಳಲ್ಲಿ ಸ್ವೀಕರಿಸಲಾಗುತ್ತಿದೆ. ಈ ರೀತಿ ಸ್ವೀಕರಿಸಲಾಗುವ ಅರ್ಜಿಗಳಿಗೆ ಪ್ರತ್ಯೇಕ ಫಿಫೋ ಪದ್ಧತಿಯಿದ್ದು ಸರದಿ ಸಾಲಿನಲ್ಲಿ ಪ್ರಕರಣಗಳ ವಿಲೇವಾರ ಸಹ ಜರುಗಿಸಲಾಗುತ್ತಿದೆ.

ಆದರೆ ಕೆಲವೊಂದು ಪ್ರಕರಣಗಳಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ ಕರ್ನಾಟಕ ಸರ್ಕಾರದಿಂದ ಅನುಮೋದನೆಗೊಂಡ ಪವರ್ ಪ್ರಾಜೆಕ್ಟಗಳಿಗೆ ಸಂಬಂಧಿಸಿದಂತೆ ಖಾಸಗಿ ಒಡೆತನದ ಕೃಷಿ ಜಮೀನುಗಳನ್ನು ಖರೀದಿಸುತ್ತಿದ್ದು ಸದರಿ ಜಮೀನುಗಳಿಗೆ 11ಇ ನಕ್ಷೆಯನ್ನು ಶೀಘ್ರವೆ ಒದಗಿಸಲು ಕಷ್ಟಸಾಧ್ಯವಾದ ಕಾರಣ ಈ ರೀತಿ ಸಾರ್ವಜನಿಕರ ಉಪಯೋಗಕ್ಕಾಗಿ ಖರೀದಿಸಲಾಗುವ ಜಮೀನುಗಳ ಕುರಿತು 11ಇ ನಕ್ಷೆಯನ್ನು ಶೀಘ್ರ ತಯಾರಿಸಿ ವಿತರಿಸುವ ನಿಟ್ಟಿನಲ್ಲಿ ತಂತ್ರಾಂಶದಲ್ಲಿ ಸರ್ಕಾರಿ ಉಪಯೋಗಕ್ಕಾಶಗಿ ಎಂದು ಹೊಸ ಅವಕಾಶವನ್ನು ಕಲ್ಪಿಸಲಾಗಿದ್ದು ಈ ಮೂಲಕ ಅನುಷ್ಠಾನಗೊಳಿಸುತ್ತಿದ್ದು ಈಗಾಗಲೇ ಹಲವಾರು ಕೃಷಿ ಜಮೀನುಗಳನ್ನು ಖರೀದಿಸುವುದಕ್ಕೆ, ಸಂಬಂಧಿಸಿದ ಜಮೀನಿನ ಮಾಲೀಕರಿಂದ ಖರೀದಿ ಒಪ್ಪಂದ ಪತ್ರಗಳನ್ನು ಮಾಡಿಕೊಂಡಿರುತ್ತದೆ.

ಮುಂದುವರಿದು ಪ್ರಸ್ತುತ ಉಲ್ಲೇಖದ ಪತ್ರದನ್ವಯ ಕರ್ನಾಟಕ ಸರ್ಕಾರದ ಇಂಧನ ಇಲಾಖೆಯ ಆದೇಶ ಕ್ರಮಾಂಕ ಇ ಎನ್ 492 ಎನ್ ಸಿ. ಇ 2010 ದಿನಾಂಕ 21/04/2011 ಹಾಗೂ ಇಎನ್ 249 ಎನ್ ಸಿಇ 2016 ದಿನಾಂಕ:16/11/2016 ರಂತೆ ಪವನ ವಿದ್ಯುತ್ ಯೋಜನೆಯನ್ನು ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನ, ಬ.ಬಾಗೇವಾಡಿ, ಟಕ್ಕಳಕಿ, ಮುತ್ತಗಿ ಮತ್ತಿತರ ಗ್ರಾಮಗಳಲ್ಲಿ ಸದರಿ ಪವನ ವಿದ್ಯುತ್ ಯೋಜನೆಯನ್ನು 31/03/2018 ರೊಳಗೆ ಅನುಷ್ಠಾನಗೊಳಿಸಬೇಕಾಗಿರುವುದರಿಂದ ಹಾಗೂ ಕಂಪನಿಯ ಕೆಲವು ಅಂಶಿಕ ಸಾಮರ್ಥ್ಯದ ಯೋಜನೆಗಳನ್ನು ಹಲವಾರು

ಕಂಪನಿಗಳಿಗೆ ವರ್ಗಾವಣೆ ಮಾಡುವ ಸಲುವಾಗಿ ಜಮೀನು ಮಾಲೀಕರಿಂದ ಮಾಡಿಕೊಂಡಿರುವ ಖರೀದಿ ಒಪ್ಪಂದಗಳನ್ನು ಕಂಪನಿಗಳ ಹೆಸರುಗಳಿಗೆ ವರ್ಗಾವಣೆ ಮಾಡಲು ಮತ್ತು ಕರ್ನಾಟಕ ಭೂ ಸುಧಾರಣೆ ಕಾಯ್ದೆಯ ಸೆಕ್ಷನ್ 109(1)ರಡಿ ಜಮೀನು ಖರೀದಿಸಲು 11ಇ ನಕ್ಷೆಯ ಅತ್ಯಂತ ಅವಶ್ಯಕವಾಗಿರುವುದಾಗಿ ತಿಳಿಸಿದ್ದು ಈ ಸಂಬಂಧ ಈ ಇಲಾಖೆಯಿಂದ 11 ಇ ನಕ್ಷೆಗೆ ಸಂಬಂಧಿಸಿದಂತೆ ಭೂಮಾಪಕರಿಗೆ ಹಂಚಿಕೆಯಾಗುವ ಪ್ರಕ್ರಿಯೆ ಈಗಾಗಲೇ ತಡವಾಗಿದ್ದು ಸದರಿ ಯೋಜನೆಯನ್ನು ನಿಗದಿತ ಕಾಲಾವದಿಯೊಳಗೆ ಅಂದರೆ 31/3/2018 ರೊಳಗೆ ಯಶಸ್ವಿಯಾಗಿ ಮುಗಿಸಿಕೊಡಲು ಸಹಕರಿಸಲು ಹಾಗೂ ಸಮಸ್ಯೆಯನ್ನು ಬಗೆಹರಿಸಿಕೊಡಬೇಕೆಂದು ಕೋರಿರುತ್ತಾರೆ. ಸದರಿ ಪತ್ರದಲ್ಲಿನ ಕೋರಿಕೆ ಮೇರೆಗೆ ಇಲಾಖೆಯು ಈ ಕೆಳಕಂಡಂತೆ ಹೊಸ ತಂತ್ರಾಂಶವನ್ನು ಅಳವಡಿಸಿ ಕ್ರಮ ಜರುಗಿಸಿರುತ್ತದೆ.

ಸಾರ್ವಜನಿಕ ಉಪಯೋಗಕ್ಕಾಗಿ ಕರ್ನಾಟಕ ಸರ್ಕಾರದಿಂದ ಅನುಮೋದಿಸಲ್ಪಟ್ಟ ಪವರ್ ಪ್ರಾಜೆಕ್ಟ್ ನಂತಹ ಯೋಜನೆಗೆ ಸಹಕರಿಸಲು ಹಾಗೂ ಯೋಜನೆಯನ್ನು ನಿಗದಿತ ಕಾಲಾವಧಿಯಲ್ಲಿ ಅನುಷ್ಠಾನಗೊಳಿಸುವ ಉದ್ದೇಶದಿಂದಾಗಿ 11ಇ ನಕ್ಷೆಗಾಗಿ ಸ್ವೀಕೃತಗೊಳ್ಳುವ ಅರ್ಜಿಗಳನ್ನು ಇನ್ನು ಮುಂದೆ ಸರ್ಕಾರಿ ಅವಶ್ಯಕತೆಗೆ 11 ಇ ನಕ್ಷೆ ವಿತರಿಸಲು ನೀಡಿರುವ software ನಲ್ಲಿ ದಾಖಲಿಸಿ ನಿರ್ವಹಿಸುವಂತೆ ಈ ಮೂಲಕ ಸೂಚಿಸಿದೆ. ಇದಕ್ಕೆ ಸಂಬಂದಿಸಿದ ಅರ್ಜಿ ಶುಲ್ಕವನ್ನು ಆಪರೇಟರ್ ರವರು ಸ್ವೀಕರಿಸಿ ಮಾನ್ಯ ಆಯುಕ್ತರ ಪದನಾಮದ ಖಾತೆಗೆ ಜಮಾ ಮಾಡುವಂತೆ ಈ ಮೂಲಕ ಸೂಚಿಸಿದೆ.

2/3/18

ಆಯುಕ್ತರು

ಭೂಮಾಪನ ಕಂದಾಯ ವ್ಯವಸ್ಥೆ

ಮತ್ತು ಭೂದಾಖಲೆಗಳ ಇಲಾಖೆ ,

ಪ್ರತಿಯನ್ನು:-

1) ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ
2) ಎಲ್ಲಾ ಉಪವಿಭಾಗಾಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ
3) ಎಲ್ಲಾ ಭೂಮಾಪನ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪನಿರ್ದೇಶಕರುಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
4) ಎಲ್ಲಾ ಭೂದಾಖಲೆಗಳ ಸಹಾಯಕ ನಿರ್ದೇಶಕರುಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
5) ಎಲ್ಲಾ ತಹಶೀಲ್ದಾರ್ ರವರುಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
6) ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ
7) ಕೇಂದ್ರ ಕಛೇರಿಯ ಎಲ್ಲಾ ಶಾಖೆಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ